**1ನೇ ಅಧಿಕ ಜಿಲ್ಲಾ ವ ಸತ್ರ ನ್ಯಾಯಾಧೀಶರು , ಧಾರವಾಡ ಮೊಕ್ಕಾಂ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ.**

ಸಾಕ್ಷಿದಾರರ ಹೆಸರು : ಬಸವರಾಜ ತಂದೆ ಈರಪ್ಪಾ ಕಿತ್ತೂರ

ವಯಸ್ಸು : 53 ವರ್ಷ

ಉದ್ಯೋಗ : ಎ ಎಸ್ ಐ, ವಿದ್ಯಾನಗರ ಪೋಲಿಸ ಠಾಣೆ

ವಾಸಸ್ಥಳ : ಹುಬ್ಬಳ್ಳಿ

(ದಿನಾಂಕ 17-06-2026 ರಂದು ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು)

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರಕಾರಿ ಅಭಿಯೋಜಕರಿಂದ**

ನಾನು 2017 ರಿಂದ 2023 ರವರೆಗೆ ವಿದ್ಯಾನಗರ ಪೋಲಿಸ ಠಾಣೆಯಲ್ಲಿ ಹೆಚ್ ಸಿ ಆಗಿ ಕೆಲಸ ಮಾಡಿರುತ್ತೇನೆ.

2. ದಿಃ 05-07-2022 ರಂದು ತನಿಖಾಧಿಕಾರಿಗಳು ನನ್ನನ್ನು ಶವ ಪಂಚನಾಮೆಗೆಂದು ಕರೆದುಕೊಂಡು ಹೋದರು. ಅದರಂತೆ ನಾನು ಅವರೊಂದಿಗೆ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಯ ಶವಾಗಾರಕ್ಕೆ ತೆರಳಿ ಅಲ್ಲಿ ತನಿಖಾಧಿಕಾರಿಗಳು ಶವ ಪಂಚನಾಮೆಯನ್ನು ಮಧ್ಯಾಹ್ನ 3-00 ರಿಂದ 5-00 ರವರೆಗೆ ಮಾಡಿದಾಗ, ಫೋಟೋ ತೆಗೆದಿರುತ್ತೇನೆ. ಈ ಬಗ್ಗೆ ನಾನು ಶವ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ನಿಪಿ-56 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ **ನಿಪಿ-56(ಬಿ)** ಎಂದು ಗುರುತಿಸಲಾಯಿತು. ನಿಪಿ-3 ರಿಂದ ನಿಪಿ-10 ಫೋಟೋಗಳನ್ನು ನೋಡಿ ಸದರಿ ಫೋಟೋಗಳನ್ನು ಶವ ಪಂಚನಾಮೆ ಕಾಲಕ್ಕೆ ತಾನು ತೆಗೆದಿದ್ದೇನೆ ಎಂದು ನುಡಿದಿದ್ದಾರೆ.

3. ಅದೇ ದಿನ ತನಿಖಾಧಿಕಾರಿಗಳು President hotel ಗೆ ನನ್ನನ್ನು ಕರೆದುಕೊಂಡು ಹೋದರು. ಅಲ್ಲಿ ದೂರುದಾರರು ತನಿಖಾಧಿಕಾರಿಗಳಿಗೆ ಮೃತನು ತಂಗಿದ್ದ ರೂಮನ್ನು ತೋರಿಸಿದಾಗ ಪಂಚನಾಮೆಯನ್ನು ಸಂಜೆ 7-00 ರಿಂದ 8-00 ರವರೆಗೆ ಮಾಡಿದರು. ಸದರಿ ಪಂಚನಾಮೆ ಮಾಡುವ ಕಾಲಕ್ಕೆ ನಾನು ಹಾಜರಿದ್ದು ಮಹಜರನ್ನು ಪಂಚಸಾಕ್ಷಿಗಳು ಹೇಳಿದ ಹಾಗೆ ಬರೆದಿರುತ್ತೇನೆ. ನಿಪಿ-11 ಮಹಜರನ್ನು ನೋಡಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿದ ಕಾರಣ **ನಿಪಿ-11(ಡಿ)** ಎಂದು ಗುರುತಿಸಲಾಯಿತು.

4. ದಿಃ 06-07-2022 ರಂದು ತನಿಖಾಧಿಕಾರಿಗಳು ಮಧ್ಯಾಹ್ನ 1-00 ರಿಂದ 3-00 ರವರೆಗೆ ಪೋಲಿಸ ಠಾಣೆಯಲ್ಲಿ ಆರೋಪಿತರು ಹಾಜರು ಮಾಡಿದ ಮೊಬೈಲನ್ನು ಜಪ್ತಿ ಮಾಡಿಕೊಳ್ಳುವಾಗ ಮತ್ತು ಆರೋಪಿಗಳು ತೋರಿಸಿದ ಕಾರನ್ನು ಜಪ್ತಿ ಮಾಡಿಕೊಳ್ಳುವಾಗ ಹಾಜರಿದ್ದು ಅಲ್ಲಿ ಮಾಡಿದ ಮಹಜರನ್ನು ನನ್ನ ಕೈಬರವಣಿಗೆಯಲ್ಲಿ ಬರೆದಿರುತ್ತೇನೆ. ನಿಪಿ-60 ಮಹಜರನ್ನು ನೋಡಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿದ ಕಾರಣ **ನಿಪಿ-60(ಬಿ)** ಎಂದು ಗುರುತಿಸಲಾಯಿತು.

5. ದಿಃ 08-07-2022 ರಂದು ತನಿಖಾಧಿಕಾರಿಗಳು ಬೆಳಿಗ್ಗೆ 6-30 ರಿಂದ 11-00 ರವರೆಗೆ 1 ನೇ ಆರೋಪಿಯ ಮನೆಯಲ್ಲಿ ಶೋಧನಾ ಕಾರ್ಯ ಮಾಡುವಾಗ ನಾನು ಹಾಜರಿದ್ದು ಅಲ್ಲಿ ಮಾಡಿದ ಮಹಜರನ್ನು ನನ್ನ ಕೈಬರವಣಿಗೆಯಲ್ಲಿ ಬರೆದಿರುತ್ತೇನೆ. ನಿಪಿ-79 ಮಹಜರನ್ನು ನೋಡಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿದ ಕಾರಣ **ನಿಪಿ-79(ಬಿ)** ಎಂದು ಗುರುತಿಸಲಾಯಿತು.

6. ಅದೇ ದಿನ ತನಿಖಾಧಿಕಾರಿಗಳು ಸಂಜೆ 5-00 ರಿಂದ 5-45 ರವರೆಗೆ ಹುಬ್ಬಳ್ಳಿಯ ಕೆನರಾ ಹೊಟೆಲಿನಲ್ಲಿ ಆರೋಪಿಗಳು ತೋರಿಸಿದ ಸ್ಥಳದ ಪಂಚನಾಮೆ ಮಾಡುವ ಕಾಲಕ್ಕೆ ನಾನು ಹಾಜರಿದ್ದು ಅಲ್ಲಿ ಮಾಡಿದ ಮಹಜರನ್ನು ನನ್ನ ಕೈಬರವಣಿಗೆಯಲ್ಲಿ ಬರೆದಿರುತ್ತೇನೆ. ನಿಪಿ-83 ಮಹಜರನ್ನು ನೋಡಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿದ ಕಾರಣ **ನಿಪಿ.83(ಬಿ)** ಎಂದು ಗುರುತಿಸಲಾಯಿತು.

7. ಅದೇ ದಿನ ತನಿಖಾಧಿಕಾರಿಗಳು ಪ್ರೆಸಿಡೆಂಟ್ ಹೊಟೇಲಿನಲ್ಲಿ ಸಂಜೆ 6-15 ರಿಂದ 7.00 ರವರೆಗೆ ಆರೋಪಿಗಳ ಸಮಕ್ಷಮದಲ್ಲಿ ಸ್ಥಳದ ಪಂಚನಾಮೆ ಮಾಡುವ ಕಾಲಕ್ಕೆ ನಾನು ಹಾಜರಿದ್ದು ಅಲ್ಲಿ ಮಾಡಿದ ಮಹಜರನ್ನು ನನ್ನ ಕೈಬರವಣಿಗೆಯಲ್ಲಿ ಬರೆದಿರುತ್ತೇನೆ. ನಿಪಿ-86 ಮಹಜರನ್ನು ನೋಡಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿದ ಕಾರಣ **ನಿಪಿ.86(ಬಿ)** ಎಂದು ಗುರುತಿಸಲಾಯಿತು.

8. ದಿಃ 15-07-2022 ರಂದು ವಿದ್ಯಾನಗರ ಪೋಲಿಸ ಠಾಣೆಯಲ್ಲಿ ದೀಪಕ ಚಿಂಚೋರೆ(ಚಾಸಾಃ38) ರವರು ತಮ್ಮ ಮೊಬೈಲ ಫೋನನ್ನು ತನಿಖಾಧಿಕಾರಿಗಳ ವಶಕ್ಕೆ ನೀಡಿದಾಗ ಅಲ್ಲಿ ಮಾಡಿದ ಮಹಜರಿನ ಸಮಯ ನಾನು ಹಾಜರಿದ್ದು ಫೋಟೋ ತೆಗೆದಿರುತ್ತೇನೆ. ಆ ಬಗ್ಗೆ ಮಹಜರಿಗೆ ಸಹಿ ಮಾಡಿರುತ್ತೇನೆ. ನಿಪಿ-116 ರಲ್ಲಿರುವ ತನ್ನ

ಸಹಿಯನ್ನು ಗುರುತಿಸಿದ ಕಾರಣ **ನಿಪಿ-116(ಬಿ)** ಎಂದು ಗುರುತಿಸಲಾಯಿತು. ನಿಪಿ-117 ಫೊಟೋವನ್ನು ನೋಡಿ ನಿಪಿ-116 ರ ಕಾಲಕ್ಕೆ ತೆಗೆದ ಫೋಟೋ ಎಂದು ಗುರುತಿಸಿದ್ದಾರೆ.

9. ದಿಃ 17-05-2022 ರಂದು ತನಿಖಾಧಿಗಳೊಂದಿಗೆ ಹೊಟೇಲಿಗೆ ಹೋಗಿ, ತನಿಖಾಧಿಕಾರಿಗಳು ಅಲ್ಲಿ ಸಿಸಿ ಕ್ಯಾಮರಾದ ದೃಶ್ಯಾವಳಿಗಳನ್ನು ಸಂಗ್ರಹಿಸುವಾಗ ಮಾಡಿದ ಮಹಜರಿನ ಸಮಯದಲ್ಲಿ ನಾನು ಹಾಜರಿದ್ದೆನು ಮತ್ತು ಫೊಟೋ ತೆಗೆದೆನು. ಆ ಬಗ್ಗೆ ಅಲ್ಲಿ ಮಾಡಿದ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ನಿಪಿ-45 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ **ನಿಪಿ-45(ಸಿ)** ಎಂದು ಗುರುತಿಸಲಾಯಿತು. ನಿಪಿ-46 ರಿಂದ ನಿಪಿ-50 ಫೊಟೋಗಳನ್ನು ನೋಡಿ ಆ ಸಮಯದಲ್ಲಿ ತೆಗೆದ ಫೋಟೋಗಳು ಎಂದು ಗುರುತಿಸಿದ್ದಾರೆ. ಈ ಮಹಜರನ್ನು ಮಧ್ಯಾಹ್ನ 4-00 ರಿಂದ ಸಂಜೆ 7-30 ರವರೆಗೆ ಮಾಡಿರುತ್ತಾರೆ.

10. ಅದೇ ದಿನ ರಾತ್ರಿ 8-10 ರಿಂದ 11-30 ರವರೆಗೆ ತನಿಖಾಧಿಕಾರಿಗಳು ಕೆನರಾ ಹೊಟೇಲಿನ ಸಿಸಿ ಕ್ಯಾಮರಾದ ದೃಶ್ಯಾವಳಿಗಳನ್ನು ಸಂಗ್ರಹಿಸುವಾಗ ಮಾಡಿದ ಮಹಜರಿನ ಸಮಯದಲ್ಲಿ ನಾನು ಹಾಜರಿದ್ದೆನು ಮತ್ತು ಫೊಟೋ ತೆಗೆದೆನು. ಆ ಬಗ್ಗೆ ಅಲ್ಲಿ ಮಾಡಿದ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ನಿಪಿ-51 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ **ನಿಪಿ-51(ಸಿ)** ಎಂದು ಗುರುತಿಸಲಾಯಿತು. ನಿಪಿ-52 ಫೊಟೋವನ್ನು ನೋಡಿ ಆ ಸಮಯದಲ್ಲಿ ತೆಗೆದ ಫೋಟೋ ಎಂದು ಗುರುತಿಸಿದ್ದಾರೆ. ಸಾಕ್ಷಿಯು ಮುಂದುವರೆದು ದಿಃ 17.05.2022 ಅಲ್ಲ ದಿಃ 17.07.2022 ಎಂದು ಪುನಃ ನುಡಿದಿದ್ದಾರೆ.

11. ದಿಃ 22-07-2022 ರಂದು ಸಂದೇಶ (ಚಾಸಾಃ39) ರವರು ತಮ್ಮ ಮೊಬೈಲ ಫೋನನ್ನು ತನಿಖಾಧಿಕಾರಿಗಳ ವಶಕ್ಕೆ ನೀಡಿದಾಗ ಅಲ್ಲಿ ಮಾಡಿದ ಮಹಜರಿನ ಸಮಯ ನಾನು ಹಾಜರಿದ್ದು ಫೋಟೋ ತೆಗೆದಿರುತ್ತೇನೆ. ಆ ಬಗ್ಗೆ ಮಹಜರಿಗೆ ಸಹಿ ಮಾಡಿರುತ್ತೇನೆ. ನಿಪಿ-101 ರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ ಕಾರಣ **ನಿಪಿ-101(ಸಿ)** ಎಂದು ಗುರುತಿಸಲಾಯಿತು. ನಿಪಿ.102 ಮತ್ತು 103 ಫೊಟೋವನ್ನು ನೋಡಿ ನಿಪಿ-101 ರ ಕಾಲಕ್ಕೆ ತೆಗೆದ ಫೋಟೋ ಎಂದು ಗುರುತಿಸಿದ್ದಾರೆ.

12. ದಿಃ 14-08-2022 ರಂದು ಚಾಸಾಃ60 ತಿಮ್ಮೇನಹಳ್ಳಿ ರವರು 1 ಮತ್ತು 2 ನೇ ಅರೋಪಿತರ ವಿವಿಧ ಭಂಗಿಗಳ ಫೊಟೋಗಳನ್ನು ತನಿಖಾಧಿಕಾರಿಗಳಿಗೆ ನೀಡಿದಾಗ ಅಲ್ಲಿ ಮಾಡಿದ ಮಹಜರಿನ ಸಮಯ ನಾನು ಹಾಜರಿದ್ದು ಫೋಟೋ ತೆಗೆದಿರುತ್ತೇನೆ. ಆ ಬಗ್ಗೆ ಮಹಜರಿಗೆ ಸಹಿ ಮಾಡಿರುತ್ತೇನೆ. ನಿಪಿ-110 ರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ ಕಾರಣ **ನಿಪಿ-110(ಬಿ)**

ಎಂದು ಗುರುತಿಸಲಾಯಿತು. ನಿಪಿ.111 ಮತ್ತು 113 ಫೋಟೋಗಳನ್ನು ನೋಡಿ ನಿಪಿ-110 ರ ಕಾಲಕ್ಕೆ ತೆಗೆದ ಫೋಟೋ ಎಂದು ಗುರುತಿಸಿದ್ದಾರೆ. ಚಾಸಾಃ60 ರವರು ನಮ್ಮ ಇಲಾಖೆಯ ಖಾಯಂ ಫೋಟೋಗ್ರಾಫರ್ ಆಗಿದ್ದು, ಆರೋಪಿತರ ವಿವಿದ ಭಂಗಿಗಳ ಫೋಟೋಗಳನ್ನು ಹಾಜರು ಮಾಡಿರುತ್ತಾರೆ. ಮೇಲೆ ಹೇಳಿದ ಫೋಟೋಗಳನ್ನು ನಾನು ನನ್ನ ಸ್ಯಾಮಸಂಗ್ ಜೆ-7 ಮೊಬೈಲ್‌ನಲ್ಲಿ ತೆಗೆದಿರುತ್ತೇನೆ. ಈ ರೀತಿ ಫೋಟೊ ತೆಗೆದ ಬಗ್ಗೆ ನಾನು ಧೃಡಿಕರಣ ಪತ್ರವನ್ನು ನೀಡಿರುತ್ತೇನೆ. ಸದರಿ ಧೃಡಿಕರಣ ಪತ್ರವನ್ನು ಮತ್ತು ಸಾಕ್ಷಿಯ ಸಹಿಯನ್ನು, ಗುರುತಿಸಿದ ಕಾರಣ ಅವುಗಳನ್ನು ಕ್ರಮವಾಗಿ **ನಿಪಿ-123** ಮತ್ತು **ನಿಪಿ-123(ಎ)** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಆರ್ ಜಿ ಕೆ ವಕೀಲರಿಂದಃ</u>**

13. ಇಲಾಖಾ ವತಿಯಿಂದ ವಿದ್ಯಾನಗರ ಪೋಲಿಸ ಠಾಣೆಗೆ ಕ್ಯಾಮರಾವನ್ನು ಒದಗಿಸಲಾಗಿರುತ್ತದೆ ಎಂದರೆ ಸರಿ. ತಖಾಧಿಕಾರಿಗಳೊಂದಿಗೆ ನಾನು ಠಾಣೆಯಿಂದ ಹೋಗಿರುತ್ತೇನೆ. ಆ ಸಮಯದಲ್ಲಿ ನಾನು ಇಲಾಖಾ ಕ್ಯಾಮರಾವನ್ನು ನನ್ನ ಜೊತೆ ತೆಗೆದುಕೊಂಡು ಹೋಗಲಿಲ್ಲ. ಏಕೆಂದರೆ ಆ ಕ್ಯಾಮರಾವನ್ನು ಬೇರೆ ಪಂಚನಾಮೆ ಸಲುವಾಗಿ ತೆಗೆದುಕೊಂಡು ಹೋಗಿದ್ದರು. ಮೊಬೈಲ ಫೋನಿನಲ್ಲಿ ಫೋಟೋ ತೆಗೆದಾಗ ಅದರಲ್ಲಿ ಫೋಟೋ ತೆಗೆದ ದಿನಾಂಕ ಮತ್ತು ಸಮಯ ಕಾಣಿಸುತ್ತದೆ ಎಂದರೆ ನನ್ನ ಮೊಬೈಲ ಫೋನಿನಲ್ಲಿ ಆ ವ್ಯವಸ್ಥೆ ಇರುವುದಿಲ್ಲ. ನಾನು ಬಳಸುತ್ತಿದ್ದ ಫೋನ Android ಫೋನ ಆಗಿತ್ತು. Android phone ನಲ್ಲಿ ತೆಗೆದ ಫೋಟೋಗಳ ಮೇಲೆ ದಿನಾಂಕ ಮತ್ತು ಸಮಯ ಕಾಣಿಸುತ್ತದೆ ಎಂದರೆ ನನ್ನ ಫೋನನಲ್ಲಿ ಆ ಸೌಲಭ್ಯ ಇರಲಿಲ್ಲ. ನಾನು ತೆಗೆದ ಫೋಟೋಗಳನ್ನು ಹುಬ್ಬಳ್ಳಿಯ Mundaragi Photo Studio ದಲ್ಲಿ ಪ್ರಿಂಟ್ ಹಾಕಿಸಿರುತ್ತೇನೆ. ಸದರಿ ಸ್ಟುಡಿಯೋದಲ್ಲಿ ಪ್ರಿಂಟ್ ಹಾಕಿಸಿದ ಬಗ್ಗೆ ನಾನು ಸ್ಟೂಡಿಯೋದವರಿಗೆ ಅದರ ಮೊತ್ತವನ್ನು ಪಾವತಿಸಿರುತ್ತೇನೆ. ಆ ರೀತಿ ಮೊತ್ತ ಪಾವತಿಸಿದ ಬಗ್ಗೆ ರಶೀದಿ ಇರುವುದಿಲ್ಲ.

ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು.

***( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಿದೆ }***

**ಸಾ ಓ ಹೇ ಕೇ ಸರಿ ಇದೆ**

(ಪಲ್ಲವಿ ಬಿ ಆರ್)
**1ನೇ ಅಧಿಕ ಸತ್ರ ನ್ಯಾಯಾಧೀಶರು, ಹುಬ್ಬಳ್ಳಿ**